ಒ.ಎಸ್. ನಂ.112/2026
ಪಿಡಬ್ಲು-1

ದಿನಾಂಕ 13.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ 1 ರಿಂದ 8ನೆ ಪ್ರತಿವಾದಿ ಪರ ವಕೀಲರಿಂದಃ

ನಿಪಿ-54 ಮತ್ತು 55 ಗಳನ್ನು ಈ ದಾವೆ ದಾಖಲಿಸುವ ಸಮಯದಲ್ಲಿ ಹಾಜರುಪಡಿಸಿಲ್ಲ ಆದರೆ ಈಗ ನಿಪಿ-54 ಮತ್ತು 55 ಗಳನ್ನು ಖೊಟ್ಟಿಯಾಗಿ ತಯಾರಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಪಾಲು ಪಡೆಯುವ ಉದ್ದೇಶದಿಂದ ನಿಪಿ-54 ಮತ್ತು 55 ಗಳನ್ನು ಖೊಟ್ಟಿಯಾಗಿ ತಯಾರಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಹಣಮಂತರಾಯ ಬಸನಿಂಗಪ್ಪನ ಮಗ ಅಲ್ಲ ಎಂದರೆ ಸರಿಯಲ್ಲ. ಸದರಿ ಹಣಮಂತರಾಯನು ಶಿವಪ್ಪ ಮತ್ತು ಲಕ್ಷ್ಮಿಬಾಯಿರವರ ಮಗ ಎಂದರೆ ಸರಿಯಲ್ಲ. ಬಸನಿಂಗಪ್ಪನ ಹೆಂಡತಿ ಮೃತಪಟ್ಟ ನಂತರ ಎರಡನೆ ಹೆಂಡತಿಯಾಗಿ ಲಕ್ಷ್ಮಿಬಾಯಿಯವರನ್ನು ಮದುವೆಯಾಗುವ ಸಮಯದಲ್ಲಿ ಲಕ್ಷ್ಮಿಬಾಯಿಗೆ ಹಣಮಂತರಾಯ ಎಂಬ 1-ವರ್ಷದ ಮಗ ಇದ್ದ ಎಂದರೆ ಸರಿಯಲ್ಲ. ಹಣಮಂತರಾಯ ಬಸನಿಂಪ್ಪನ ಮಗ ಅಲ್ಲ ಎಂದರೆ ಸರಿಯಲ್ಲ. ಸದರಿ ಹಣಮಂತರಾಯ ಪ್ರತಿವಾದಿಯರ ಯಾವುದೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರ ಕುಟುಂಬಕ್ಕೆ ಸಂಬಂಧಪಡದ ಕಾರಣ ನನಗೆ ದಾವಾಸ್ತಿಯಲ್ಲಿ ನನಗೆ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.134/ಆ ನ್ನು ಖೊಟ್ಟಿ ರೀತಿ ನನ್ನ ಹೆಸರಿಗೆ ಮುಟೇಷನ ಮಾಡಿಕೊಂಡು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂ.134/ಆ ನ್ನು ನನ್ನ ಹೆಸರಿಗೆ ಮುಟೇಷನ ಮಾಡಿದ ಬಗ್ಗೆ ಯಾವುದೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದು ಹೇಳುತ್ತಾರೆ. 1ನೆ ಪ್ರತಿವಾದಿ ಸರ್ವೆ ನಂ.134/ಆ ರ ಮುಟೇಷನಗೆ ಸಂಬಂಧಿಸಿದ ಯಾವುದೆ ನೊಂದಾಯಿತ ಅಥವಾ ನೊಂದಾಯಿತವಲ್ಲದ ಹಕ್ಕು ಪತ್ರಗಳನ್ನು ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ 9ನೆ ಪ್ರತಿವಾದಿ ಪರ ವಕೀಲರಿಂದಃ

ನನ್ನ ಹಣಮಂತರಾಯ ಬಸನಿಂಗಪ್ಪನ ಮಗನೆಂದು ತೋರಿಸಲು ಯಾವುದೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ಸಂಬಂಧಿಸಿದ ಶಾಲಾ ದಾಖಲಾತಿಗಳು, ಜನನ ಪ್ರಮಾಣ ಪತ್ರ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನನ್ನ ತಂದೆ ಶಾಲೆ

ಕಲಿತಿಲ್ಲ ಎಂದು ಹೇಳುತ್ತಾರೆ. ನಿಪಿ-54 ಮತ್ತು 55 ರಲ್ಲಿ ಚುನಾವಣೆ ಗುರುತಿನ ಚೀಟಿಯಿದ್ದು ಸದರಿ ದಾಖಲೆಗಳನ್ನು ಮತದಾರರ ಪಟ್ಟಿಯಲ್ಲಿ ಸೇರಿಸುವಾಗ ಹಾಕಿದ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿರುತ್ತೇನೆ ಎಂದು ಹೇಳುತ್ತಾರೆ. ನನ್ನ ತಂದೆ ಹಣಮಂತರಾಯ ಬಸನಿಗಂಪ್ಪನ ಮಗನಲ್ಲದಿದ್ದರೂ ಸಹ ಖೊಟ್ಟಿ ರೀತಿಯಿಂದು ಚುನಾವಣೆ ಮತದಾರರ ಪಟ್ಟಿಯಲ್ಲಿ ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ಲಕ್ಷ್ಮಿಬಾಯಿಯವರ ಜೊತೆ ನನ್ನ ಅಜ್ಜ ಬಸನಿಂಗಪ್ಪ ಜೊತೆ ಮದುವೆಯಾಗುವ ಸಮಯದಲ್ಲಿ 1-ವರ್ಷದ ಮಗನಾಗಿದ್ದ ಹಣಮಂತರಾಯನು ಬಂದ ಕಾರಣ ಮತ್ತು ಬಸನಿಂಗಪ್ಪನ ಜೊತೆ ವಾಸವಿದ್ದ ಕಾರಣ ನಿಪಿ-54 ಮತ್ತು 55 ಗಳನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ನನ್ನ ತಂದೆ ಹಣಮಂತರಾಯರವರಿಗೆ ನನ್ನನ್ನು ಸೇರಿ 7-ಜನ ಮಕ್ಕಳಿರುತ್ತಾರೆ. ಮಡಿವಾಳಮ್ಮ, ಶಾಂತಮ್ಮ, ಶರಣಮ್ಮ, ಕಲ್ಲಮ್ಮ, ತಾರಾಬಾಯಿ, ಸೂಗಮ್ಮ ಮತ್ತು ನಾನು ಹಣಮಂತರಾಯನ ಮಕ್ಕಳಿರುತ್ತೇವೆ. ನನ್ನ ಹೆಂಡತಿಯ ಹೆಸರು ಮೈತ್ರಮ್ಮ ಎಂದರೆ ಸರಿ. ನನ್ನ ಹೆಂಡತಿ ನನ್ನ ಅಕ್ಕ ಮಡಿವಾಳಮ್ಮಳ ಮಗಳು ಎಂದರೆ ಸರಿ. ಸದರಿ ನನ್ನ ಸಹೋದರಿಯರು ನಮ್ಮ ಮನೆಗೆ ಹೋಗುವುದು ಬರುವುದು ಮಾಡುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ತಮ್ಮ ಜೀವಿತಾವಧಿಯಲ್ಲಿ ತಾನು ಬಸನಿಂಗಪ್ಪನ ಮಗ ಅಲ್ಲದ ಕಾರಣಕ್ಕಾಗಿ ನನ್ನ ತಂದೆ ಬಸನಿಂಗಪ್ಪನೆ ನನ್ನ ತಂದೆ ಎಂದು ಯಾವುದೆ ದಾವೆ ಮತ್ತು ಹಕ್ಕನ್ನು ಕೇಳಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಹಣಮಂತರಾಯನ ನಿಜವಾದ ತಂದೆ ನಗನೂರ ಗ್ರಾಮದ ಶಿವಪ್ಪ ಇರುತ್ತಾನೆ ಎಂದರೆ ಸರಿಯಲ್ಲ. ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ